
# ಬೆಳಕಿನ ಸಂಚಲನ

ಸಂಪುಟ 10, ಸಂಚಿಕೆ 2 | ದ್ವೈಮಾಸಿಕ ವಾರ್ತಾಪತ್ರ | ಮಾರ್ಚ್–ಏಪ್ರಿಲ್ 2022



**ಗುರೂಜಿ ಕೃಷ್ಣಾನಂದ** (1939-2012)

## ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

## ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

## ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

## ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಜನವರಿ 5, 2003)

**ಅನು: ಕಾಂಚನಲತಾ**

ಜೀವನ ಎನ್ನುವುದು ವಿಭಿನ್ನ ಜನರಿಗೆ ವಿಭಿನ್ನ ಸಂಗತಿಗಳಾಗಿರುತ್ತದೆ. ನನಗೆ, ಅನುಭವ ಪಡೆಯಲು ಇದೊಂದು ಅವಕಾಶವೆನಿಸುತ್ತದೆ. ಅನುಭವಿಸಲು ಈ ಭೂಮಿಯ ಮೇಲೆ ಎಷ್ಟೊಂದು ಸುಂದರವಾದ ವಿಷಯಗಳಿವೆ, ಅದಕ್ಕಾಗಿಯೇ ಅಷ್ಟೊಂದು ಆತ್ಮಗಳು ಇಲ್ಲಿಗೆ ಹಿಂಡುಹಿಂಡಾಗಿ ಬರುವುದು.

ಜೀವನವು ನಮ್ಮನ್ನು ನಾವು ಉತ್ತಮಗೊಳಿಸಿಕೊಳ್ಳುವ ಒಂದು ಪ್ರಯೋಗ ಕೂಡಾ ಆಗಿದೆ. ನಾವು ನಮ್ಮ ನಡವಳಿಕೆ, ನಮ್ಮ ದೈಹಿಕ ಚಲನೆಗಳು, ಭಾವನೆಗಳು, ಆಲೋಚನೆಗಳು, ಸಂಬಂಧಗಳು ಇತ್ಯಾದಿಗಳನ್ನು ಉತ್ತಮಪಡಿಸಿಕೊಳ್ಳಬಹುದು.

ಜೀವನವು ದೈವತ್ವವನ್ನು ಪ್ರಕಟಪಡಿಸಲು, ಪ್ರೀತಿಯನ್ನು ಪ್ರಕಟಪಡಿಸಲು ಇರುವ ಒಂದು ಅವಕಾಶ. ಕಲಿಯಲು, ಬೆಳೆಯಲು ಮತ್ತು ಪ್ರಮುಖವಾಗಿ ಸೇವೆ ಸಲ್ಲಿಸಲು ಜೀವನ ಒಂದು ಉತ್ತಮ ಅವಕಾಶ. ನಾವು ನಮ್ಮದೇ ಆದ ರೀತಿಯಲ್ಲಿ ಸೇವೆ ಸಲ್ಲಿಸಬಹುದು. ಲೈಟ್ ಮಾಸ್ಟರ್‌ಗಳ ಕೆಲಸ ಅಥವಾ ಯಾವುದೇ ಸಮಾಜಕಲ್ಯಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ನಿದ್ರಾಹೀನತೆಯಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರಿಗೆ ಕೆಲವು ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದ ನಂತರ ಚೆನ್ನಾಗಿ ನಿದ್ದೆ ಮಾಡಲು ಸಾಧ್ಯವಾಯಿತು. ತಮ್ಮ ಕಚೇರಿಗಳಲ್ಲಿನ ಒತ್ತಡದ ವಾತಾವರಣವನ್ನು ನಿಭಾಯಿಸಲೇಬೇಕಾಗಿರುವ ಅನೇಕರಿಗೆ ಈ ಅಭ್ಯಾಸ ವಿಶ್ರಾಂತಿದಾಯಕವೆನಿಸಿದೆ. ಈ ಅಭ್ಯಾಸವು ತಮ್ಮನ್ನು ತಾವೇ ಹೀಲ್‌ಮಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಜನರು ಕಂಡುಕೊಂಡಿದ್ದಾರೆ. ಇದನ್ನು ಅಭ್ಯಾಸ ಮಾಡುವ ಸಮಯದಲ್ಲಿ ಬಹುತೇಕ ಜನರು ಅಸಾಧಾರಣ ಶಾಂತಿಯನ್ನು ಅನುಭವಿಸುತ್ತಾರೆ. ಅನೇಕರಿಗೆ ಇದು ತೃಪ್ತಿಕರವೆನಿಸಿದೆ ಹಾಗೂ ಅವರು ದೈವತ್ವದ ಜೊತೆ ಒಂದು ರೀತಿಯ ಸಂಪರ್ಕವನ್ನು ಅನುಭವಿಸುತ್ತಾರೆ. ಲೈಟ್ ಚಾನಲಿಂಗ್ ಲಕ್ಷಾಂತರ ಸಕಾರಾತ್ಮಕ ಸಾಧ್ಯತೆಗಳಿರುವ ಪ್ರಪಂಚಕ್ಕೆ ಸಾಗುವ ಬಾಗಿಲುಗಳನ್ನು ತೆರೆಯುತ್ತದೆ!

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಕಾಂಚನಲತಾ**

12ನೇ ವಿಶ್ವ ಚಾನೆಲ್ಸ್ ದಿನದಂದು ನಮಗೆ ಒಂದು ಅದ್ಭುವಾದ ಯಶಸ್ಸು ದೊರೆಯಿತು. ಆ ದಿನ, ಲೈಟ್ ಚಾನೆಲ್ಸ್ ತಂಡವು ಅತಿ ಹೆಚ್ಚು ಬೆಳಕನ್ನು ಕೆಳಗೆ ತರಲು ನಿರ್ಧರಿಸಿತ್ತು. ಸುಮಾರು 80 ಲೈಟ್ ಚಾನೆಲ್ ಕಾರ್ಯಕರ್ತರು ಸ್ಥೈರ್ಯ ಮತ್ತು ದೃಢ ನಿಶ್ಚಯವನ್ನು ಪ್ರದರ್ಶಿಸಿದರು. ನಾವು ಗಮನಹರಿಸಿದರೆ, ಏನನ್ನಾದರೂ ಸಾಧಿಸಬಹುದು ಎಂಬುದನ್ನು ಅವರು ಮತ್ತೊಮ್ಮೆ ರುಜುವಾತು ಮಾಡಿದರು.

ಪಿಡುಗಿನ ಕಾರಣದಿಂದಾಗಿ ಕಳೆದ ಎರಡು ವರ್ಷಗಳಿಂದ ಶಾಲೆಗಳಿಗೆ ಭೇಟಿ ನೀಡಲು ನಮಗೆ ಸಾಧ್ಯವಾಗಿರಲಿಲ್ಲ. ಇಷ್ಟೊಂದು ಸಮಯದ ಅಂತರವಿದ್ದರೂ ಕೂಡಾ, ಶಾಲಾ ಅಧಿಕಾರಿಗಳು ನಮಗಿರುವ ಸವಾಲುಗಳನ್ನು ಅರ್ಥ ಮಾಡಿಕೊಂಡರು ಮತ್ತು ನಮ್ಮ ಕೆಲಸವನ್ನು ಬೆಂಬಲಿಸಿದರು. ವಿಶ್ವ ಚಾನೆಲ್ಸ್ ದಿನದಂದು ನೀಡಿದ ಅಗಾಧ ಪ್ರತಿಕ್ರಿಯೆಗೆ ನಾವು ಶಾಲಾ ಅಧಿಕಾರಿಗಳಿಗೆ, ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಕೃತಜ್ಞರಾಗಿದ್ದೇವೆ. ಈ ಸಂಚಲನದಲ್ಲಿ ಭಾಗಿಯಾಗಿ ವಿಶ್ವ ಶಾಂತಿಗೆ ಕೊಡುಗೆ ನೀಡಿದ ಪ್ರತಿಯೊಬ್ಬ ಲೈಟ್ ಚಾನೆಲ್‌ಗೂ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಬಲವಾದ ಅಹಂ ಅಥವಾ ಕೋಪವಿದ್ದಾಗ, ಜನರು ಸತ್ಯವನ್ನು ತಿಳಿಯಲು ಇಷ್ಟ ಪಡುವುದಿಲ್ಲ.
- ನಾವು ಅಂತರಾಳದಿಂದ ಪರಿವರ್ತನೆ ಹೊಂದಿದಾಗ, ಪ್ರೀತಿಯು ಸಹಜವಾಗಿ, ಅನಾಯಾಸವಾಗಿ ಹೊರ ಹರಿಯುತ್ತದೆ. ಆಗ ನಾವು ಸಹಜವಾಗಿಯೇ ಪ್ರಾಮಾಣಿಕರಾಗಿರುತ್ತೇವೆ, ಸಹಜವಾಗಿಯೇ ಒಳ್ಳೆಯವ-ರಾಗಿರುತ್ತೇವೆ ಹಾಗೂ ಸಹಜವಾಗಿಯೇ ಕೋಪ-ಗೊಳ್ಳುವುದಿಲ್ಲ.
- ಒಬ್ಬ ನಿಜವಾದ ಧ್ಯಾನಿಯು ಸದಾ ಕಾಲ ಶಾಂತಿ, ಪ್ರಾಮಾಣಿಕತೆ ಮತ್ತು ಒಳ್ಳೆಯತನದಿಂದಿರಬೇಕೆಂದು ನಿರೀಕ್ಷಿಸಲಾಗಿದೆ.
- ನಮ್ಮನ್ನು ನಾವು ಒಳ್ಳೆಯವರು ಎಂದು ಊಹಿಸಿಕೊಳ್ಳುತ್ತಿ-ದ್ದರೆ, ಮುಂದೊಂದು ದಿನ ನಾವು ಒಳ್ಳೆಯವರಾಗುತ್ತೇವೆ.
- ನಮ್ಮಲ್ಲಿ ಪರಿವರ್ತನೆಯ ಪ್ರಕ್ರಿಯೆ ಆರಂಭವಾಗಿದ್ದರೆ, ಗ್ರಹಗಳು ತಮ್ಮ ಪ್ರಭಾವದಿಂದ ನಮಗೆ ತೊಂದರೆ ಕೊಡುವುದಿಲ್ಲ.
- ನಾವು ಪರಿವರ್ತನೆಯಾಗಲು ಆರಂಭಿಸಿದರೆ, ಗ್ರಹಗಳು ವಾಸ್ತವವಾಗಿ ನಮಗೆ ಸಹಾಯ ಮಾಡುತ್ತವೆ. ಆಗ, ಗ್ರಹಗಳ ಸ್ಥಾನಗಳು ಮತ್ತು ಜಾತಕಗಳ ಬಗ್ಗೆ ಚಿಂತಿಸುವ ಅಗತ್ಯವಿರುವುದಿಲ್ಲ.
- ಭ್ರಷ್ಟಾಚಾರ, ಅನ್ಯಾಯ, ಅಸತ್ಯ, ತಪ್ಪುಕಾರ್ಯ ಇತ್ಯಾದಿ-ಗಳ ವಿರುದ್ಧ ನಾವು ಕೆಲವೊಮ್ಮೆ ಕೋಪಗೊಳ್ಳಬೇಕಾಗು-ತ್ತದೆ. ಆದರೆ, ಅಂತಹ ಕೋಪವು ಮೇಲ್ಮಟ್ಟದಲ್ಲಿರುವ ಒಂದು ಸಣ್ಣ ಅಲೆಯಂತಿರಬೇಕು. ಅಂತರಾಳದಲ್ಲಿ ನಾವು ಸದಾ ಶಾಂತಿಯುತರಾಗಿರಬೇಕು, ಸಮಾಧಾನದಿಂದಿರ-ಬೇಕು. ಆಳವಾದ ಮಟ್ಟದಲ್ಲಿ ಕೋಪವಿರಬಾರದು.
- ನಿಜವಾಗಿಯೂ ಆಧ್ಯಾತ್ಮಿಕವಾಗಿ ಪ್ರಗತಿ ಹೊಂದಲು ಧ್ಯಾನ ಮಾಡಲೇಬೇಕು. ಇಲ್ಲವಾದಲ್ಲಿ ಪರಿವರ್ತನೆಯುಂಟಾ-ಗುವುದಿಲ್ಲ. ಪರಿವರ್ತನೆಗಾಗಿ ಪ್ರಜ್ಞಾಪೂರ್ಣ ಪ್ರಯತ್ನ-ಗಳನ್ನು ಮಾಡಿ ಧ್ಯಾನಮಾಡಿದಾಗ ಮಾತ್ರ ಆಧ್ಯಾತ್ಮಿಕ ಪ್ರಗತಿಯುಂಟಾಗುತ್ತದೆ.
- ದೇವರ ಸೃಷ್ಟಿಯನ್ನು ಅನುಭವಿಸಲು ಈ ಬದುಕು ಒಂದು ಅವಕಾಶ. ನಾವು ಅನುಭವಿಸಲೆಂದೇ ದೇವರು ಇವೆಲ್ಲ-ವನ್ನು ಸೃಷ್ಟಿ ಮಾಡಿರುವುದು. ನಮಗೆ ಹೊಸ ಅನುಭವ-ಗಳನ್ನು ನೀಡಲು ಇದನ್ನು ಸೃಷ್ಟಿ ಮಾಡಿದನು. ಮತ್ತು ಈ ಸೃಷ್ಟಿಕಾರ್ಯವು ಇನ್ನೂ ಮುಂದುವರೆಯುತ್ತಿದೆ, ಇದು ಇನ್ನೂ ಕೊನೆಗೊಂಡಿಲ್ಲ.
- ಈ ಪ್ರಳಯಕಾಲದಲ್ಲಿ ಉಂಟಾಗುವ ಪ್ರಕ್ಷುಬ್ಧತೆಯು ನಾವು ಪರಿವರ್ತನೆ ಹೊಂದಲು ಒಂದು ಅವಕಾಶ ನೀಡುತ್ತದೆ. ಈ ಪ್ರಕ್ಷುಬ್ಧತೆಯ ಮೂಲಕ, ನಮ್ಮ ಮತ್ತು ಸೃಷ್ಟಿಯ ಬಗೆಗಿನ ಸತ್ಯಾಂಶದ ಅರಿವು ನಮಗಾಗುತ್ತದೆ.
- ಈ ಪ್ರಪಂಚವು ಈಗ ದೋಷಯುಕ್ತವಾಗಿದೆ. ಪರಿಪೂರ್ಣತೆಯ ಕಡೆಗಿನ ಪಯಣವು ಆರಂಭವಾಗಿದೆ.
- ನಾವು ದೇವರಲ್ಲಿ ಸ್ಥಿರವಾಗಿ ನೆಲೆಸದಿದ್ದರೆ ನಮಗೆ ಅಭದ್ರತೆಯ ಭಾವನೆ ಮೂಡುತ್ತದೆ. ದೇವರೊಂದಿಗೆ ಶ್ರುತಿಗೊಳ್ಳಿ. ಅವನ ಬಗ್ಗೆ ಅರಿವಿರಲಿ. ಅವನು ನಮಗೆ ಸಹಾಯ ಮಾಡಲು ಮತ್ತು ನಮ್ಮನ್ನು ರಕ್ಷಿಸಲು ಸದಾ ಕಾಯುತ್ತಿರುತ್ತಾನೆ.
- ದೇವರೊಂದಿಗೆ ಶ್ರುತಿಗೊಳ್ಳಲು ಧ್ಯಾನ ಮಾಡುತ್ತೇವೆ. ನಮಗೆ ಅವನ ಇರುವಿಕೆಯ ಅರಿವಿದ್ದರೆ, ಅತಿ ಸಣ್ಣ ಸಮಸ್ಯೆಯಿಂದ ಅತಿ ದೊಡ್ಡ ಸಮಸ್ಯೆಯವರೆಗೆ ಎಲ್ಲವನ್ನೂ ಅವನು ನೋಡಿಕೊಳ್ಳುತ್ತಾನೆ.

–ಗುರೂಜಿ ಕೃಷ್ಣಾನಂದ

## 12ನೇ ವಿಶ್ವ ಚಾನಲ್ಸ್ ದಿನದ ಆಚರಣೆ



ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ನಡೆದ ಲೈಟ್ ಚಾನಲಿಂಗ್ ಸೆಷನ್‌ಗಳು



ಅಮೃತಸರ, ವಿಶಾಖಪಟ್ಟಣ, ಚೆನ್ನೈ, ಪುಣೆ ಹಾಗೂ ಹೈದ್ರಾಬಾದ್ ನಗರಗಳ ಶಾಲೆಗಳಲ್ಲಿ ನಡೆದ ಲೈಟ್ ಚಾನಲಿಂಗ್ ಸೆಷನ್‌ಗಳು




ಆನ್–ಲೈನ್ ಮೂಲಕ ನಡೆದ ಲೈಟ್ ಚಾನಲಿಂಗ್ ಸೆಷನ್‌ಗಳು

# 12ನೇ ವಿಶ್ವ ಚಾನೆಲ್ಸ್ ದಿನ – ಒಂದು ವರದಿ

ಮನೋಜ್ ಕುಮಾರ್ ಚೋಪ್ರ; ಅನು: ಕಾಂಚನಲತಾ

12ನೇ ವಿಶ್ವ ಚಾನೆಲ್ಸ್ ದಿನಕ್ಕಾಗಿ, ನಮ್ಮ ಕಾರ್ಯಕರ್ತರ ಗುಂಪೊಂದು ನಿಸ್ವಾರ್ಥ ಮತ್ತು ಸಾರ್ವತ್ರಿಕವಾದ ಪ್ರಚಾರಕಾರ್ಯವನ್ನು ಕೈಗೊಳ್ಳಲು ನಿಶ್ಚಯ ಮಾಡಿಕೊಂಡರು. ಅಚ್ಚರಿ ಪಡುವಂತೆ, ನಮ್ಮ ಗುರಿಯನ್ನು ಸಾಧಿಸಲು, ವಿಶ್ವದ ಪ್ರತಿಯೊಂದು ಮೂಲೆಯಿಂದಲೂ ಊಹೆಗೂ ಮೀರಿದ ಹಾಗೆ ಸಹಾಯ ಒದಗಿ ಬಂತು. ನಮ್ಮ ಉದ್ದೇಶಗಳು ಪರಿಶುದ್ಧವಾಗಿದ್ದು ನಮ್ಮ ಕಾರ್ಯಗಳು ನಿಸ್ವಾರ್ಥವಾಗಿದ್ದರೆ, ಸಹಾಯ ಮಾಡಲು ಭಗವಂತನಿಗೆ ಲಕ್ಷಾಂತರ ದಾರಿಗಳಿವೆ ಎಂಬುದು ಮತ್ತೊಮ್ಮೆ ಸಾಬೀತಾಯಿತು. ಮಹರ್ಷಿ ಅಮರರವರ ಹುಟ್ಟುಹಬ್ಬವನ್ನು ವಿಶ್ವ ಚಾನೆಲ್ ದಿನವೆಂದು ಆಚರಿಸುವ ಫೆಬ್ರವರಿ 01, 2022ರಂದು ನಿಖರವಾಗಿ ಇದೇ ರೀತಿಯಲ್ಲಿ ಆಯಿತು. ಪ್ರತಿ ವರ್ಷ, ಆ ದಿನದಂದು ಅತಿ ಹೆಚ್ಚು ಬೆಳಕನ್ನು ಕೆಳಗೆ ತರುವ ಮೂಲಕ, ಪ್ರೀತಿ ಮತ್ತು ಶಾಂತಿಯ ಅಲೆಯನ್ನು ಸೃಷ್ಟಿಸಲು ನಾವು ಪ್ರಯತ್ನ ಪಡುತ್ತೇವೆ. ಈ ವರ್ಷ ಪಿಡುಗಿನ ಕಾರಣದಿಂದಾಗಿ ನಾವು ಲೆಕ್ಕವಿಲ್ಲದಷ್ಟು ಸವಾಲುಗಳನ್ನು ಎದುರಿಸಿದೆವು. ಆದರೆ, ಅದೇ ಸಮಯದಲ್ಲಿ, ಹೆಚ್ಚಿನ ಸಹಾಯವನ್ನು ನಮ್ಮ ಮಾಸ್ಟರ್‌ಗಳಿಂದ ಪಡೆದೆವು.

ವಿಶ್ವ ಚಾನೆಲ್ಸ್ ದಿನಕ್ಕಾಗಿ ಡಿಸೆಂಬರ್ 25ರಂದು ಯೋಜನೆಯನ್ನು ತಯಾರಿಸಲು ಪ್ರಾರಂಭಿಸಿದಾಗ, ಕೆಲಸ ಮಾಡಲು ನಮಗೆ ಕೆಲವೇ ಕೆಲವು ಆಯ್ಕೆಗಳಿರುವುದರ ಅರಿವಾಯಿತು. ಪ್ರಾಮಾಣಿಕವಾಗಿ ಹೇಳುವುದಾದರೆ. ಶಾಲೆಗಳು ಮುಚ್ಚಿದ್ದು ಪಿಡುಗು ತುತ್ತತುದಿ ತಲುಪಿದ ಕಾರಣ ನಮಗೆ ಸ್ವಲ್ಪ ನಿರಾಸೆಯಾಗಿತ್ತು. ಶಾಲಾ ಅಧಿಕಾರಿಗಳೊಂದಿಗೆ ಮಾತನಾಡಿ, ಭೌತಿಕವಾಗಿ ಸೆಷನ್‌ಗಳನ್ನು ನಡೆಸುವುದು ಕಷ್ಟಕರವೆಂದು ತಿಳಿಸಲು ಯೋಚಿಸಿದೆವು. ಶಾಲೆಗಳಲ್ಲಿ ಸೆಷನ್‌ಗಳನ್ನು ನಡೆಸಲು ಸಹಾಯವಾಗುವ ಲೈಟ್ ಚಾನಲಿಂಗ್ ವಿಡಿಯೋಗಳನ್ನು ಅವರಿಗೆ ಕಳುಹಿಸುವುದೆಂದು ತೀರ್ಮಾನಿಸಿದೆವು.

ಒಂದು ಅದ್ಭುತವಾದ ತ್ರೈ-ಮಾಸಿಕ ಸಭೆಯನ್ನು ಜನವರಿ 16ರಂದು ನಡೆಸಿದೆವು. ಆ ಹೊತ್ತಿಗೆ, ನಾವು ಒಂದು ಸ್ಪಷ್ಟವಾದ ಯೋಜನೆಯನ್ನು ಹೊಂದಿದ್ದೆವು. ಒಂದು ತಂಡವಾಗಿ, ನಮ್ಮ ಹಿಡಿತದಲ್ಲಿ ಇಲ್ಲದಿರುವ ವಿಷಯಗಳಿಗೆ ಚಿಂತಿಸಬಾರದೆಂದು ನಿರ್ಧರಿಸಿದೆವು. ಮತ್ತು ಅತಿ ಹೆಚ್ಚಿನ ಪರಿಶ್ರಮವನ್ನು ಹಾಕಬೇಕೆಂದು ನಿರ್ಧರಿಸಿದೆವು. ನಾವು ನಡೆಸಿದ ಆನ್‌ಲೈನ್ ಮೀಟಿಂಗ್‌ಗಳು ಸಕಾರಾತ್ಮಕವಾಗಿದ್ದವು. ನಮ್ಮ ಪ್ರತಿಯೊಂದು ಸಭೆಯೂ ಋಷಿಗಳಿಂದ ಆಶೀರ್ವದಿಸಲ್ಪಟ್ಟಿತ್ತು ಎಂದು ನನಗೆ ಅನಿಸುತ್ತದೆ. ಪ್ರತಿಯೊಬ್ಬ ಕಾರ್ಯಕರ್ತರೂ ಹೊಣೆ ಹೊತ್ತಿದ್ದರು. ಪ್ರತಿವರ್ಷದಂತೆ, ಕಾರ್ಯಕರ್ತರು ಶಾಲೆಗಳನ್ನು ಸಂಪರ್ಕಿಸುವ ಜವಾಬ್ದಾರಿಯನ್ನು ತೆಗೆದುಕೊಂಡರು. ಪ್ರತಿಯೊಂದು ತಂಡದಿಂದ ಒಂದು ಖಚಿತವಾದ ಯೋಜನೆಯನ್ನು ಮಾಡಿಕೊಳ್ಳಲಾಯಿತು. ಅದೇ ಸಮಯದಲ್ಲಿ, ನಮ್ಮ ಮಾಸ್ಟರ್‌ಗಳ ಬಳಿ ಸಹಾಯಕ್ಕಾಗಿ ಮತ್ತು ಮಾರ್ಗದರ್ಶನಕ್ಕಾಗಿ ತೀವ್ರವಾಗಿ ಪ್ರಾರ್ಥಿಸುತ್ತಿದ್ದೆವು.

ಕೆಲವು ಸವಾಲುಗಳ ಬಳಿಕ, ಹೊಸ ವಿಡಿಯೋಗಳು ತಯಾರಾದವು. ನಂತರ, ನಮ್ಮ ಕಾರ್ಯಕರ್ತರು ಆ ವಿಡಿಯೋಗಳನ್ನು ಶಾಲೆಗಳಿಗೆ ಕಳುಹಿಸಲಾರಂಭಿಸಿದರು. ಅಚ್ಚರಿಪಡುವಂತೆ, ನಮಗೆ ಅದ್ಭುತವಾದ ಪ್ರತಿಕ್ರಿಯೆಗಳು ಬರಲಾರಂಭಿಸಿದವು. ಹೆಚ್ಚಿನ ಶಾಲೆಗಳು ನಮ್ಮ ವಿನಂತಿಗಳನ್ನು ಒಪ್ಪಿಕೊಂಡರು. ನಮ್ಮ ಕೆಲಸದ ಹಿಂದೆ, ಕಾಣದ ಕೈಯೊಂದು ಕೆಲಸಮಾಡುತ್ತಿರುವುದನ್ನು ಗ್ರಹಿಸಿದೆವು.

ನಾವು ನಮ್ಮ ಹಿಡಿತದಲ್ಲಿದ್ದದ್ದನ್ನು ಮಾಡಲು ಆರಂಭಿಸಿದೆವು ಮತ್ತು ಬೆಳಕು ತನ್ನ ಹಿಡಿತದಲ್ಲಿದ್ದದ್ದೆಲ್ಲವನ್ನೂ ಮಾಡಿತು. ಬೆಳಕು ಜವಾಬ್ದಾರಿಯನ್ನು ವಹಿಸಿಕೊಂಡಾಗ, ನಾವು ಖಂಡಿತವಾಗಿಯೂ ಪವಾಡದಂತಹ ಫಲಿತಾಂಶಗಳನ್ನು ನಿರೀಕ್ಷಿಸಬಹುದು. ವಿಶ್ವ ಚಾನೆಲ್ಸ್ ದಿನದ ಕೆಲವೇ ದಿನಗಳ ಮೊದಲು, ಮಹಾರಾಷ್ಟ್ರ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಶಾಲೆಗಳು ತೆರೆದುಕೊಂಡಿದ್ದು ನಮಗೆ ಅಚ್ಚರಿ ತಂದಿತು. ಹಲವಾರು ಶಾಲೆಗಳು ಆರಂಭದ ಮೊದಲ ದಿನವೇ ಲೈಟ್ ಚಾನೆಲ್ ಮಾಡಿದವು. ಭಾರತದಾದ್ಯಂತ 1300ಕ್ಕೂ ಹೆಚ್ಚಿನ ಶಾಲೆಗಳು ಲೈಟ್ ಚಾನೆಲ್ ಮಾಡಿದವು. 165ಕ್ಕೂ ಹೆಚ್ಚಿನ ಶಾಲೆಗಳು ತಮ್ಮ ಭಾಗವಹಿಸುವಿಕೆಯ ಫೋಟೋಗಳನ್ನು ಮತ್ತು ವಿಡಿಯೋಗಳನ್ನು ನಮ್ಮೊಂದಿಗೆ ಹಂಚಿಕೊಂಡವು. ಅವರ ಪ್ರಾಮಾಣಿಕತೆ, ಪ್ರೀತಿ ಮತ್ತು ವಾತ್ಸಲ್ಯಗಳು ನಮ್ಮ ಮನವನ್ನು ಆಳವಾಗಿ ಮುಟ್ಟಿದವು.

ಆ ದಿನ, ಮೂರು ಲೈವ್ ಆನ್‌ಲೈನ್ ಸೆಷನ್‌ಗಳನ್ನು ಮಾನಸ ಫೌಂಡೇಶನ್‌ನಲ್ಲಿ ನಡೆಸಲಾಯಿತು. ಎಲ್ಲಾ ಸೆಷನ್‌ಗಳೂ ಗಾಢವಾಗಿದ್ದವು ಮತ್ತು ಶಾಂತಿಯುತವಾಗಿದ್ದವು. ಇಡೀ ಪ್ರಪಂಚವು ಪಾಲ್ಗೊಳ್ಳಲು ಈ ವೇದಿಕೆಯನ್ನು ಕಳೆದ ವರ್ಷ ಸೃಷ್ಟಿಸಲಾಯಿತು. ಬೇರೆ ಬೇರೆ ಗುಂಪಿನ ಒಂದು ಸಾವಿರಕ್ಕೂ ಹೆಚ್ಚು ಜನರು ಈ ಸಂಚಲನವನ್ನು ಹರಡುವ ನಮ್ಮ ಪ್ರಯತ್ನಗಳಲ್ಲಿ ಭಾಗಿಯಾದರು ಎಂದು ತಿಳಿದು ಸಂತೋಷವಾಯಿತು. ಇನ್ನೂ ಹೆಚ್ಚಿನ ಜನರು ಸೇರಬೇಕಾಗಿತ್ತು ಎಂದು ಬಯಸುತ್ತೇವೆ. ವಿಶ್ವ ಚಾನೆಲ್ಸ್ ದಿನದಂತಹ ಇನ್ನೂ ಅನೇಕ ಕಾರ್ಯಕ್ರಮಗಳು ಪ್ರಸ್ತುತ ಸಮಯದ ಅವಶ್ಯಕತೆಯಾಗಿದೆ.

ಈ ಸಂಚಲನವನ್ನು ಹರಡುವ ನಮ್ಮ ಪ್ರಯತ್ನದಲ್ಲಿ ಭಾಗಿಯಾದ ಪ್ರತಿಯೊಬ್ಬ ಲೈಟ್ ಚಾನೆಲ್‌ಗೂ ನಮ್ಮ ಧನ್ಯವಾದಗಳು. ■

## ಶಾಲೆಗಳಿಗೊಂದು ಮನವಿ

ನಿಮ್ಮ ಆನ್‌ಲೈನ್ ತರಗತಿಗಳ (online classes) ಪ್ರಾರಂಭದಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯ 3-7 ನಿಮಿಷಗಳ ಕಾಲ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5758 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 29.65 ಲಕ್ಷ |

ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



# 12ನೇ ವಿಶ್ವ ಚಾನಲ್ಸ್ ದಿನದ ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ರಾಮರಾವ್

ನಾನು ಈಗ ತಾನೇ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿದೆ. ಅದು ನಿಜವಾಗಿಯೂ ಚೆನ್ನಾಗಿದೆ ಅನಿಸಿತು. ಬೆಳಕು ಒಳಗೆ ಬರುವಂತೆ ಕಲ್ಪಿಸಿಕೊಂಡು, ನಮ್ಮ ದೇಹದ ಪ್ರತಿ ಭಾಗವನ್ನು ತುಂಬಿ ನಂತರ ಇಡೀ ಪ್ರಪಂಚಕ್ಕೆ ಹರಡುವುದು ಒಂದು ಸುಂದರವಾದ ಆನಂದದಾಯಕ ಸ್ಥಿತಿಯಾಗಿತ್ತು. ಅದ್ಭುತವೆನಿಸಿತು.

–ಪಿಂಕಿ, ಲೈಟ್ ಚಾನಲ್

ಲೈಟ್ ಚಾನಲಿಂಗ್ ಸೆಷನ್ ಬಹಳ ವಿಶ್ರಾಂತಿ–ದಾಯಕವಾಗಿತ್ತು. ಸೆಷನ್ ಆದ ನಂತರ ನನ್ನ ಮನಸ್ಸು ಬೇರೆಬೇರೆ ಕಡೆ ಸುತ್ತಾಡುತ್ತಿದ್ದರೂ ನನಗೆ ಹಗುರವೆನಿಸಿತು.

–ಸುಜಾತ, ಲೈಟ್ ಚಾನಲ್

ಲೈಟ್ ಚಾನಲಿಂಗ್ ಸೆಷನ್‌ಗಳು ತುಂಬಾ ಚೆನ್ನಾಗಿ ಇದ್ದವು, ಮತ್ತು ಇನ್ನು ಮುಂದೆ ತಾವೇ ಸ್ವತಃ ಸೆಷನ್‌ಗಳನ್ನು ನಡೆಸುತ್ತೇವೆ ಎಂದು ಅಮೃತಸರದ ಅಜಿತ್ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮತಿ ರಮಾ ಮಹಾಜನ್‌ರವರು ಪ್ರತಿಕ್ರಿಯೆ ನೀಡಿದರು. ಪ್ರತಿ ದಿನ ಅಭ್ಯಾಸ ಮಾಡಲು ಈ ತಂತ್ರದ ಒಂದು ಚಿಕ್ಕ ವಿಡಿಯೋವನ್ನು ಕಳುಹಿಸಬೇಕೆಂದು ನನ್ನನ್ನು ವಿನಂತಿಸಿಕೊಂಡರು.

– ಅಲ್ಕ ಸಿಂಗ್, ಲೈಟ್ ಚಾನಲ್ ಕಾರ್ಯಕರ್ತೆ

ಆನ್–ಲೈನ್ ಸೆಷನ್ ನಡೆಸುವುದಕ್ಕೆ ನನ್ನನ್ನು ಕೇಳಿದ ಪುಣೆಯ ಕಲ್ಮಾಡಿ ಪ್ರೌಢ ಶಾಲೆಯ ಶಿಕ್ಷಕಿಯೊಬ್ಬರು, ಲೈಟ್ ಚಾನಲಿಂಗ್ ಸೆಷನ್ ನಡೆಸಿದ ನಂತರ, ಸೆಷನ್ ಬಹಳ ಚೆನ್ನಾಗಿತ್ತೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತಿ ಮೂರನೆಯ ಭಾನುವಾರದಂದು ಜಯಂತ್ ಸರ್‌ರವರು ನಡೆಸುವ ಲೈವ್ ಆನ್–ಲೈನ್ ಸೆಷನ್‌ಗಳಲ್ಲಿ ತಪ್ಪದೆ ಭಾಗವಹಿಸುವುದಾಗಿಯೂ ಅವರು ಹೇಳಿದರು. ತಮ್ಮ ತರಗತಿಯ ಮಕ್ಕಳೊಂದಿಗೆ ಅನಾರೋಗ್ಯ ಪೀಡಿತ ಜನರನ್ನು ಗುಣಪಡಿಸಲು ಬೆಳಕನ್ನು ಬಳಸುತ್ತಾರೆ, ಅವರಿಗೆ ಬೆಳಕನ್ನು ಚಾನೆಲ್ ಮಾಡುತ್ತಾರೆ. ಇನ್ನು ಮುಂದೆ ಕೂಡ ಹೆಚ್ಚು ಸೆಷನ್‌ಗಳಲ್ಲಿ ಭಾಗವಹಿಸುವುದಾಗಿ ಆಶಿಸಿದರು.

–ಸಂತೋಷ್ ಕೋರೆ, ಲೈಟ್ ಚಾನಲ್ ಕಾರ್ಯಕರ್ತ

ಪುಣೆಯ ವಿಖೆ ಪಾಟೀಲ್ ಮೆಮೋರಿಯಲ್ ಸ್ಕೂಲ್‌ನಲ್ಲಿ ನಡೆಸಿದ ಲೈಟ್ ಚಾನೆಲಿಂಗ್ ಸೆಷನ್ ಶ್ರೇಷ್ಠವಾಗಿತ್ತು. ಹುಷಾರಿಲ್ಲದ ಶಿಕ್ಷಕಿಯೊಬ್ಬರು ಕೂಡ ಸೆಷನ್‌ನಲ್ಲಿ ಭಾಗವಹಿಸಿದರು. ಸೆಷನ್ ಮುಗಿದ ನಂತರ, ಆ ಸಮಯದಲ್ಲಿ ಅವರಿಗೆ ಬೇಕಾಗಿದ್ದ ಹೆಚ್ಚು ಸಕಾರಾತ್ಮಕತೆ, ಪ್ರಾಶಾಂತತೆ ಮತ್ತು ಚೈತನ್ಯಗಳ ಅನುಭವವಾಯಿತೆಂದು ಅವರು ಹೇಳಿದರು. ವಿದ್ಯಾರ್ಥಿಗಳು ಕೂಡ ಶಾಂತಿ ಮತ್ತು ಸಮಾಧಾನವನ್ನು ಅನುಭವಿಸಿದರು.

–ಪ್ರತಿಭಾ ಓಕ್ ಮತ್ತು ಪದ್ಮಜ ಬಾಜ್‌ಪೈ,<br>
ಲೈಟ್ ಚಾನೆಲ್ ಕಾರ್ಯಕರ್ತರು

ಲೈಟ್ ಚಾನಲಿಂಗ್ ತುಂಬಾ ಚೆನ್ನಾಗಿತ್ತು. ಈಗ ನಾನು ಹೆಚ್ಚು ಸಕಾರಾತ್ಮಕವಾಗಿದ್ದೇನೆ.

–ಮಂಗಲ್ ಕಾರ್ಪೆ, ಲೈಟ್ ಚಾನೆಲ್

ಲೈಟ್ ಚಾನಲಿಂಗ್ ಬಹಳ ಚೆನ್ನಾಗಿತ್ತು. ಮೊದಲ ಸಲ ನಾನು ಲೈಟ್ ಚಾನಲ್ ಮಾಡಿದೆ. ಧನ್ಯವಾದಗಳು.

–ವಸುಮತಿ ಪರಂಧಾಮನ್, ಲೈಟ್ ಚಾನಲ್

ಅದ್ಭುತವಾದ ಲೈಟ್ ಚಾನಲಿಂಗ್ ತಂತ್ರಕ್ಕೆ ಧನ್ಯವಾದಗಳು. ಈಗ ಹೆಚ್ಚು ಸಕಾರಾತ್ಮಕವಾದ ಚೈತನ್ಯಗಳನ್ನು ನಾನು ಅನುಭವಿಸುತ್ತಿದ್ದೇನೆ.

–ಹೇಮ, ಲೈಟ್ ಚಾನಲ್

ಅದ್ಭುತವಾದ ಲೈಟ್ ಚಾನಲಿಂಗ್ ಸೆಷನ್‌ಗಾಗಿ ನಿರ್ಮಲರವರಿಗೆ ಧನ್ಯವಾದಗಳು. ಬೆಳಿಗ್ಗೆ ಲೈಟ್ ಚಾನಲ್ ಮಾಡಿದ ನಂತರ ನಾನು ಪೂರ್ತಿಯಾಗಿ ಸಕಾರಾತ್ಮಕ ಭಾವನೆಗಳಿಂದ ಕೂಡಿದ್ದೆ.

–ಗೌರವ್, ಲೈಟ್ ಚಾನಲ್

ಅದ್ಭುತವಾದ ಲೈಟ್ ಚಾನಲಿಂಗ್ ಸೆಷನ್‌ಗಾಗಿ ಧನ್ಯವಾದಗಳು. ಅದು ನನ್ನನ್ನು ಆಲೋಚನೆಗಳಿಲ್ಲದ ಅರಿವಿನ ಸ್ಥಿತಿಗೆ ಕೊಂಡೊಯ್ಯಿತು ಮತ್ತು ಬೆಳಿಗ್ಗೆ ನಾನೂ ಪೂರ್ತಿಯಾಗಿ ಸಕಾರಾತ್ಮಕವಾಗಿದ್ದೆ. ಈಗ ನಾನು ಆರಾಮವಾಗಿದ್ದೇನೆ ಮತ್ತು ಸಂತೋಷವಾಗಿದ್ದೇನೆ.

–ನೀಲಾಕ್ಷಿ ಜೋಶಿ, ಲೈಟ್ ಚಾನಲ್




ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ